**ಪಾಠ–12** **ಮಾರ್ಚ್ 16–22**

# ಬ್ಯಾಬಿಲೋನಿಗೆ ನ್ಯಾಯತೀರ್ಪು



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಪ್ರಕ 17ನೇ ಅಧ್ಯಾಯ, ಯೆರೆ 51:13, ಧ.ಕಾಂಡ 28:36–38, ಪ್ರಕ 13:1–8, ಪ್ರಕ 13:18, ಪ್ರಕ 16:2–12.

**ಸ್ಮರಣವಾಕ್ಯ : ಪರಲೋಕದಿಂದ ಬಂದ ಮತ್ತೊಂದು ಶಬ್ದವನ್ನು ಕೇಳಿದೆನು; ಅದು ಹೇಳಿದ್ದೇನೆಂದರೆ– ನನ್ನ ಪ್ರಜೆಗಳೇ ಅವಳನ್ನು ಬಿಟ್ಟು ಬನ್ನಿರಿ; ನೀವು ಅವಳ ಪಾಪಗಳಲ್ಲಿ ಪಾಲುಗಾರರಾಗಬಾರದು; ಅವಳಿಗಾಗುವ ಉಪದ್ರವಗಳಿಗೆ ಗುರಿಯಾಗಬಾರದು. ಅವಳ ಪಾಪಗಳು ಒಂದರ ಮೇಲೊಂದು ಸೇರಿ ಆಕಾಶದ ಪರ್ಯಂತಕ್ಕೂ ಬೆಳೆದಿವೆ. ದೇವರು ಅನ್ಯಾಯವನ್ನು ಜ್ಞಾಪಿಸಿಕೊಂಡನು (ಪ್ರಕ 18:4–5).**

ಆರನೆಯ ಉಪದ್ರವವು ಯೂಫ್ರೇಟಿಸ್ ನದಿಯು ಹಿಂಗುವಂತೆ ಮಾಡುತ್ತದೆ ಎಂದರೆ, ಈ ಲೋಕದ ಮರುಳಾದ ಜನರು ತಮ್ಮ ಬೆಂಬಲನ್ನು ಅಂತ್ಯಕಾಲದ ಬ್ಯಾಬಿಲೋನಿನಿಂದ ಹಿಂಪಡೆದುಕೊಳ್ಳುತ್ತಾರೆ ಎಂಬುದನ್ನು ಸಾಂಕೇತಿಕವಾಗಿ ಹೇಳುತ್ತದೆ. ಕಳೆದ ವಾರದ ಪಾಠದಲ್ಲಿ ನಾವು ನೋಡಿದಂತೆ ಬ್ಯಾಬಿಲೋನಿನ ಅಧಿಕಾರವು ಛಿದ್ರವಾಗುವುದಕ್ಕೆ ಮುಂಚೆ ದೇವರ ಕೆಲಸಕ್ಕೆ ವಿರೋಧವಾಗಿ

ದೆವ್ವದ ಚಟುವಟಿಕೆಗಳು ವ್ಯಾಪಕವಾಗಿ ನಡೆಯುತ್ತದೆ (ಪ್ರಕ 16:13,14). ದೆವ್ವದ ಚಟುವಟಿಕೆಗಳು ದುಷ್ಟರನ್ನು ಒಂದು ಮಾಡುವಲ್ಲಿ ಯಶಸ್ವಿಯಾಗುತ್ತವೆ ಮತ್ತು ಹರ್ಮಗೆದೋನ್ ಯುದ್ಧಕ್ಕೆ ಅವರನ್ನು ಸಿದ್ಧಪಡಿಸುತ್ತದೆ.

ಅಂತಿಮ ಯುದ್ಧದಾರಂಭದಲ್ಲಿ ಒಂದು ದೊಡ್ಡ ಭೂಕಂಪವು ಏಳನೇ ಉಪದ್ರವದ ಭಾಗವಾಗಿ ಸಂಭವಿಸುತ್ತದೆ. ಈ ಭೂಕಂಪವು ಬ್ಯಾಬಿಲೋನಿನ ಒಗ್ಗಟ್ಟನ್ನು ಛಿದ್ರ ಮಾಡಿ ಅದನ್ನು ಮೂರು ಭಾಗಗಳನ್ನಾಗಿ ಸೀಳುತ್ತದೆ (ಪ್ರಕ 16:18,19). ಅಂತ್ಯಕಾಲದ ಬ್ಯಾಬಿಲೋನು ಒಂದು ನಗರವೆಂದು ವರ್ಣಿಸಲ್ಪಟ್ಟಿದೆ. ಇದು ದೇವಜನರ ವಿರೋಧವಾಗಿ ಲೋಕದ ರಾಜಕೀಯ ಮತ್ತು ಧಾರ್ಮಿಕ ಅಧಿಕಾರಗಳನ್ನು ಅಲ್ಪಾವಧಿಗೆ ಒಂದುಗೂಡಿಸುವುದನ್ನು ಸೂಚಿಸುತ್ತದೆ. ಇದರ ಒಗ್ಗಟ್ಟು ಛಿದ್ರವಾಗುತ್ತದೆ. ಆದುದರಿಂದ ಅಂತ್ಯಕಾಲದ ಬ್ಯಾಬಿಲೋನು ನಾಶವಾಗುತ್ತದೆ. ಅಂತ್ಯಕಾಲದ ಬ್ಯಾಬಿಲೋನಿನ ನಾಶನವನ್ನು ಮತ್ತು ಅದರ ನಾಶಕ್ಕೆ ಏನು ಕಾರಣಗಳೆಂದು ವರ್ಣಿಸುವ ಮೊದಲು (ಪ್ರಕ 17:12 ರಿಂದ ಪ್ರಕ 18:24 ರವರೆಗೆ), ಪ್ರಕಟನೆ 17 ಮತ್ತು 18ನೇ ಅಧ್ಯಾಯಗಳು ಅಂತ್ಯಕಾಲದ ಭ್ರಷ್ಟ ಧರ್ಮ ವ್ಯವಸ್ಥೆಯನ್ನು ರಕ್ತವರ್ಣದ ಮೃಗದ ಮೇಲೆ ಕುಳಿತಿರುವ ಜಾರಸ್ತ್ರೀ ರೂಪದಿಂದ ವರ್ಣಿಸಲ್ಪಟ್ಟಿದೆ. ತನ್ನ ಪ್ರಕ್ರಿಯರು ಜೊತೆಯಾಗಿ ಈ ಜಾರಸ್ತ್ರೀ ಬ್ಯಾಬಿಲೋನು ರಕ್ತವರ್ಣದ ಮೃಗದ ಮೇಲೆ ಕುಳಿತು ಸವಾರಿ ಮಾಡುವವಳಾಗಿ ಇಡೀ ಲೋಕವನ್ನೇ ದೇವರಿಗೆ ವಿರೋಧವಾಗುವಮ್ತೆ ಮರಳು ಮಾಡುತಾಳೆ (ಪ್ರಕ 17:1–11). ಮಾರ್ಚ್ 23ರ ಸಬ್ಬತ್ತಿಗೆ ಸಿದ್ಧತೆ ಮಾಡಿಕೊಳ್ಳಲು ಈ ಪಾಠವನ್ನು ಅಧ್ಯಯನ ಮಾಡಿರಿ.

**ಭಾನುವಾರ** **ಮಾರ್ಚ್ 17**

## ಜಾರಸ್ತ್ರೀ ಬ್ಯಾಬಿಲೋನು

**ಪ್ರಕಟನೆ 17:1, ಯೆರೆ 51:13 'ಬಹುನೀರುಗಳು' ಅಂದರೆ ಯೂಫ್ರೇಟೀಸ್ ನದಿ, ಇದರ ಮೇಲೆ ಬ್ಯಾಬಿಲೋನು ಕುಳಿತಿದೆ. ಪ್ರಕ 17:15 ರ ಪ್ರಕಾರ 'ಬಹು ನೀರುಗಳು' ಎಂಬುದು ಏನನ್ನು ಸೂಚಿಸುತ್ತದೆ?**

ಸತ್ಯವೇದದಲ್ಲಿ ಸ್ತ್ರೀಯು ದೇವಜನರಿಗೆ ಸಂಕೇತವಾಗಿದೆ ಪ್ರಕಟನೆಯಲ್ಲಿ ದೇವರ ಸತ್ಯ ಸಭೆಯನ್ನು ಶುದ್ಧ ಸ್ತ್ರೀ ಎಂಬಂತೆ ವರ್ಣಿಸಲಾಗಿದೆ (ಪ್ರಕ 12:1, ಪ್ರಕ 22:17). ಹಾಗಾಗಿ ಜಾರಸ್ತ್ರೀಯು ಸುಳ್ಳಿನ ಮತ್ತು ಭ್ರಷ್ಟ ಸಭೆಯನ್ನು ಪ್ರತಿನಿಧಿಸುತ್ತಾಳೆ. ಪ್ರಕಟನೆ 17:5 ರಲ್ಲಿ ಈ ಜಾರಸ್ತ್ರೀಯನ್ನು ಮಹಾಬ್ಯಾಬಿಲೋನ್ ಎಂಬುದಾಗಿ ಗುರುತಿಸುತ್ತದೆ. ಹೇಗೆ ಪುರಾತನ ಬ್ಯಾಬಿಲೋನ್ ತನ್ನ ಅಸ್ತಿತ್ವಕ್ಕೆ ಯೂಫ್ರೇಟೀಸ್ ನದಿಯ ಮೇಲೆ ಅವಲಂಬಿತವಾಗಿತ್ತೋ ಹಾಗೆಯೇ ಅಂತ್ಯಕಾಲದ ಬ್ಯಾಬಿಲೋನು ತನ್ನ ಯೋಜನೆ ಕಾರ್ಯಗಳನ್ನು ಜಾರಿಗೆ ತರಲು ಜನರ ಬೆಂಬಲವನ್ನು ನೆಚ್ಚುಕೊಂಡಿದೆ. ಪ್ರಕಟನೆ 17:2 ಜೊತೆಯಾಗಿ ಪ್ರಕಟ 14:8 ಮತ್ತು 18:2,3ನ್ನು ಓದಿರಿ. ಅಂತ್ಯಕಾಲದ ಬ್ಯಾಬಿಲೋನಿನಿಂದ ಮರಳುಗೊಳ್ಳುತ್ತಿರುವ ಯಾದ ಎರಡು ಗುಂಪಿನ ಜನರು ಅನೈತಿಕ ಸಂಬಂಧಕ್ಕೆ ಒಳಗಾಗಿವೆಯೆಂದು ಸೂಚಿತರಾಗಿದ್ದಾರೆ?

ಮೊದಲ ಗುಂಪು ರಾಜಕೀಯ ಅಧಿಕಾರವನ್ನು ನಿಯಂತ್ರಿಸುತ್ತಿರುವ ಭೂರಾಜರುಗಳು; ಇವರು ಜಾರಸ್ತ್ರೀ ಬ್ಯಾಬಿಲೋನಿನ ಜೊತೆ ಅನೈತಿಕ ಸಂಬಂಧ (ವ್ಯಭಿಚಾರ)ದಲ್ಲಿ ನಿರತಳಾಗಿರುವಂತೆ ಚಿತ್ರಿಸಲಾಗಿದೆ. ಹಳೆಯ ಒಡಂಬಡಿಕೆಯಲ್ಲಿ ಇಸ್ರಾಯೇಲ್ಯರು ಆಗಾಗ ದೇವರನ್ನು ಬಿಟ್ಟು ಮಿಥ್ಯವಾದ ಧರ್ಮವನ್ನು ಪಾಲಿಸುತ್ತಾ ಧರ್ಮಭ್ರಷ್ಟರಾದುದನ್ನು 'ಜಾರತನ' ಎಂಬ ಮಾತುಗಳಿಂದ ವರ್ಣಿಸಲಾಗಿದೆ (ಯೆಶಾ 1:21, ಯೆರೆ 3:1–10).

ಭೂರಾಜರ ಮತ್ತು ಜಾರಸ್ತ್ರೀಯ ನಡುವೆ ಇರುವ ಸಂಬಂಧವು ಅಂತ್ಯಕಾಲದ ಬ್ಯಾಬಿಲೋನ್ ಮತ್ತು ರಾಜಕೀಯ ಅಧಿಕಾರಿಗಳ ನಡುವೆ ಇರುವ ಅನೈತಿಕ ಸಂಬಂಧವು ಸಭೆ ಮತ್ತು ರಾಜ್ಯದ ಐಕ್ಯತೆಯನ್ನು ಸಂಕೇತಿಸುತ್ತದೆ. ಎರಡನೆ ಗುಂಪು ಯಾವುದೆಂದರೆ ಜಾರಸ್ತ್ರೀ ಬ್ಯಾಬಿಲೋನಿನ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡು ಅದರ ನಿಯಂತ್ರಣಕ್ಕೆ ಒಳಪಟ್ಟಿರುವ ಭೂನಿವಾಸಿಗಳು. ಇವರನ್ನು ಬ್ಯಾಬಿಲೋನಿನ ಜಾರತ್ವದ ದ್ರಾಕ್ಷಾರಸದಿಂದ ಮತ್ತರನ್ನಾಗಿ ಮಾಡಲಾಗಿದೆ ಎಂದರೆ ನಿಯಂತ್ರಿಸುವ ರಾಜಕೀಯ ಅಧಿಕಾರಗಳಿಗೆ ವ್ಯತಿರಿಕ್ತವಾಗಿ ಬ್ಯಾಬಿಲೋನು ತಮ್ಮನ್ನು ಸಂರಕ್ಷಿಸುತ್ತದೆ ಎಂದುಕೊಂಡು ಅದರ ಬೋಧನೆ ಮತ್ತು ಪದ್ಧತಿಗಳ

ಪಾಲನೆಯಿಂದ ಮತ್ತರಾಗಿದ್ದಾರೆ. ಮದ್ಯಪಾನ ಮಾಡಿದವರು ಸರಿಯಾಗಿ ಆಲೋಚಿಸಲಾರರು ಮತ್ತು ಅವರನ್ನು ಸುಲಭವಾಗಿ ಆಳಬಹುದು (ಯೆಶಾ 28:7). ನಂಬಿಗಸ್ತರಾದ ಉಳಿದವರನ್ನು ಹೊರತುಪಡಿಸಿ ಇಡೀ ಲೋಕದವರನ್ನು ಬ್ಯಾಬಿಲೋನು ದಾರಿ ತಪ್ಪಿಸುತ್ತದೆ.

ಈವಾಗ ಮತ್ತು ಯಾವಾಗಲೂ ಇರುವಂತೆ ಜನಸಮೂಹಗಳು ಕಡೇ ಗಳಿಗೆಯಲ್ಲೂ ತಪ್ಪಾಗಿ ನಡೆಯುತ್ತವೆ. ಜನರು ಜನಪ್ರಿಯ ಭಾವುಕತೆಗಳನ್ನು (Sentiment) ಹಿಂಬಾಲಿಸುತ್ತಾರೆ. ಇವು ಎಷ್ಟೇ ಜನಪ್ರಿಯವಾಗಿದ್ದರೂ (ಪ್ರಸಿದ್ಧವಾಗಿದ್ದರೂ) ಇವುಗಳನ್ನು ಅನುಸರಿಸುವುದು ಅಪಾಯಕರವೆಂದು ಹೇಗೆ ಹೇಳುತ್ತೇವೆ?

**ಸೋಮವಾರ** **ಮಾರ್ಚ್ 18**

## ರಕ್ತವರ್ಣದ ಮೃಗದ ಮೇಲೆ ಕುಳಿತ ಸವಾರಿ ಮಾಡುತ್ತಿರುವ ಜಾರಸ್ತ್ರೀ

**ಪ್ರಕಟನೆ 17ನೇ ಅಧ್ಯಾಯವನ್ನು ಓದಿರಿ.**

ಏಳು ಉಪದ್ರವಗಳ ಪಾತ್ರೆಗಳನ್ನು ಹಿಡಿದಿರುವ ಏಳು ದೂತರುಗಳಲ್ಲಿ ಒಬ್ಬನು ಯೋಹಾನನಿಗೆ ಬಹು ನೀರುಗಳ ಮೇಲೆ ಕೂತಿರುವ ಜಾರಸ್ತ್ರೀಗೆ ಆಗುವ ನ್ಯಾಯತೀರ್ಪನ್ನು ಹೇಳುತ್ತಾನೆ. ಯೋಹಾನನು ಆಕೆಯನ್ನು ನೋಡಿದಾಗ ಆಕೆಯು ರಕ್ತವರ್ಣದ ಮೃಗದ ಮೇಲೆ ಸವಾರಿ ಮಾಡುತ್ತಿದ್ದಳು.

ನೀರು ಮತ್ತು ಮೃಗದ ಸಂಕೇತಗಳು ಯಾವ ಬಗೆಯಾಗಿ ಬ್ಯಾಬಿಲೋನಿನ ಬೆಂಬಲಿಗರನ್ನು ಸರಿಯಾಗಿ ವರ್ಣಿಸುತ್ತವೆ?

ಯೋಹಾನನು ದರ್ಶನದಲ್ಲಿ ಅರಣ್ಯಕ್ಕೆ ಒಯ್ಯಲುಟ್ಟಾಗ ಆತನು ರಕ್ತವರ್ಣದ ಮೃಗದ ಮೇಲೆ ಕುಳಿತಿರುವ ಜಾರಸ್ತ್ರೀಯನ್ನು ನೋಡುತ್ತಾನೆ. ಜಾರಸ್ತ್ರೀಯು ಧಾರ್ಮಿಕ ಘಟಕ (ವಿಷಯ)ವನ್ನು ಪ್ರತಿನಿಧಿಸಿದರೆ ಮೃಗವು ರಾಜಕೀಯ ಅಧಿಕಾರವನ್ನು ಸಂಕೇತಿಸುತ್ತದೆ. ಲೋಕದ ಮತ್ತು ರಾಜಕೀಯ ಅಧಿಕಾರವನ್ನು ಸವಾರಿ ಮಾಡುತ್ತಿರುವ ಧಾರ್ಮಿಕ ಚಿತ್ರವು ಹಿಂದೆ ಇಲ್ಲದಿದ್ದ ಎರಡು ಪ್ರತ್ಯೇಕ

ಘಟಕಗಳನ್ನು ಸೂಚಿಸುತ್ತದೆ. ಇಲ್ಲಿ ಧರ್ಮ ಮತ್ತು ರಾಜಕೀಯ ಒಟ್ಟಾಗಿರುವುದನ್ನು ಈವಾಗ ನೋಡುತ್ತೇವೆ ಆದರೆ ಹಿಂದೆ ನೋಡಿರುವುದಿಲ್ಲ. ಧಾರ್ಮಿಕ, ಲೌಕಿಕ ಮತ್ತು ರಾಜ್ಯಿಯ ಅಧಿಕಾರಗಳ ಮೇಲೆ ಧರ್ಮವು ಸವಾರಿ ಮಾಡುತ್ತಿರುವ ಚಿತ್ರವು ಇದಾಗಿದ್ದು ಎರಡು ಪ್ರತ್ಯೇಕ ಘಟಕಗಳನ್ನು ಸೂಚಿಸುತ್ತದೆ.

ಈ ಹಿಂದೆ ಹೀಗೆ ಧರ್ಮವೂ ರಾಜಕೀಯವೂ ಒಂದಾದ ನಿದರ್ಶನವು ನಮಗೆ ಸಿಗುವುದಿಲ್ಲ. ಆದಾಗ್ಯೂ ಈ ಎರಡೂ ಘಟಕಗಳು ಅಂತ್ಯಕಾಲದಲ್ಲಿ ಒಟ್ಟಾಗಿ ಬೆಸೆದುಕೊಳ್ಳುವುದನ್ನು ಪ್ರವಾದನೆಯು ತೋರಿಸುತ್ತದೆ. ಮೃಗದ ಮೇಲೆ ಸವಾರಿ ಮಾಡುವ ಪರಿಕಲ್ಪನೆಯು ಅದರ ಮೇಲೆ ನಡೆಯುವ ದಬ್ಬಾಳಿಕೆಯನ್ನು ಸೂಚಿಸುತ್ತದೆ.

ಅಂತ್ಯಕಾಲದ ಧಾರ್ಮಿಕ ವ್ಯವಸ್ಥೆಯು ರಕ್ತವರ್ಣದ ಮೃಗದ ಮೇಲೆ ಸವಾರಿ ಮಾಡುವ ಸವಾರನಾಗಿ ಲೌಕಿಕ ಮತ್ತು ರಾಜಕೀಯ ಅಧಿಕಾರಿಗಳ ಮೇಲೆ ತನ್ನ ಪ್ರಾಬಲ್ಯವನ್ನು ಮೆರೆಯುತ್ತದೆ.

**ಜಾರಸ್ತ್ರೀಯ ಯಾವ ಸ್ವಭಾವವು ಘಟಸರ್ಪವನ್ನೂ ಸಮುದ್ರದಿಂದ ಏರಿಬಂದ ಮೃಗವನ್ನೂ ಭೂಮಿಯ ಮೇಲೆ ಏರಿಬಂದ ಮೃಗವನ್ನೂ ಪ್ರಕಟನೆ 12ನೇ ಮತ್ತು 13ನೇ ಅಧ್ಯಾಯಗಳು ಸೂಚಿಸುತ್ತವೆ?**

ಜಾರಸ್ತ್ರೀಯು ಅತಿರಂಜಿತವಾಗಿ ನೇರಳೆ ಮತ್ತು ರಕ್ತವರ್ಣದ ಉಡುಪನ್ನು ಧರಿಸಿಕೊಂಡು ಅಲಂಕೃತಳಾಗಿರುವ ಜಾರಸ್ತ್ರೀಯು ಅತಿರಂಜಿತವಾಗಿ ಧೂಮ್ರವರ್ಣದ ವಸ್ತ್ರಗಳನ್ನೂ ರಕ್ತಾಂಬರವನ್ನೂ ಧರಿಸಿಕೊಂಡು ಚಿನ್ನ ರತ್ನ, ಮುತ್ತು ಇವುಗಳಿಂದ ಅಲಂಕರಿಸಿಕೊಂಡಿದ್ದಳು. ಅಂಥ್ ಅಲಂಕಾರನನ್ನು ಹಿಂದಿನ ಕಾಲದ ವೇಶ್ಯೆಯರು (ಸೂಳೆಯರು) ಜನರನ್ನು ಹೆಚ್ಚಾಗಿ ಆಕರ್ಷಿಸಲು ತೊಡುತ್ತಿದ್ದರು (ಯೆರೆಮೀಯ 4:30).

ರಕ್ತವರ್ಣ ಮತ್ತು ಧೂಮ್ರವರ್ಣ ಈ ಧಾರ್ಮಿಕ ವ್ಯವಸ್ಥೆ ಸ್ವಭಾವಕ್ಕೆ ಅನುಗುಣವಾಗಿದೆ. ಜಾರಸ್ತ್ರೀಯ ಉಡುಪು ಹಳೆ ಒಡಂಬಡಿಕೆಯ ಮಹಾಯಾಜಕನ ದೀಕ್ಷ ವಸ್ತ್ರದ ಒಂದು ನಕಲು. ಮಹಾಯಾಜಕನ ದೀಕ್ಷವಸ್ತ್ರವು ಉಡುಪೂ ಸಹಾ ಧೂಮ್ರವರ್ಣದ, ರಕ್ತವರ್ಣದ ಮತ್ತು ಚಿನ್ನದ ದಾರಗಳಿಂದ

ಎಣೆಯಲ್ಪಟ್ಟಿತ್ತು (ವಿ.ಕಾಂಡ 28:36–38). ಮಹಾಯಾಜಕನ ಚೊಕ್ಕ ಬಂಗಾರದ ಪಟ್ಟದ ಮೇಲೆ 'ಯೆಹೋವನಿಗೆ ಮೀಸಲು' ಎಂಬ ಲಿಪಿಯು ಕೆತ್ತಿಸಿದ್ದ ಹಾಗೆಯೇ ಬರೆಯಲ್ಪಟ್ಟದ್ದವು (ಪ್ರಕ 17:3) ಆಕೆಯಲ್ಲಿ ಹಿಡಿದಿರುವ ಪಾತ್ರೆಯು ದೇವದರ್ಶನ ಗುಡಾರದ ಪಾತ್ರಯನ್ನು ನೆನಪಿಸುತ್ತದೆ. ಬ್ಯಾಬಿಲೋನಿನ ರಾಜ ಬೇಲ್ಶಚ್ಚರನು ಮತ್ತು ಅವನ ಅತಿಥಿಗಳು ಸಹಾ ತನ್ನ ತಂದೆ ನೆಬೂಕದ್ನಿಚ್ಚರನು ಯೆರೂಸಲೇಮಿನ ದೇವಾಲಯದಿಂದ ಎತ್ತುಕೊಂಡು ಬಂದ ಪಾತ್ರೆಗಳಲ್ಲಿ ಪಾನಮಾಡಿದ್ದರು (ದಾನಿ 5:24).

ಸ್ತ್ರೀಯ ಕೈಯಲ್ಲಿದ್ದ ಪಾತ್ರೆಯು ಲೋಕವನ್ನು ದೇವರಿಂದ ದೂರ ಮಾಡುವ ಸೈತಾನನ ಅಂತ್ಯಕಾಲದ ಧಾರ್ಮಿಕ ವ್ಯವಸ್ಥೆಯು ಮಿಥ್ಯತ್ವಗಳಿಂದ ತುಂಬಿತ್ತು. ಆದರೆ ನೋಡುವುದಕ್ಕೆ ಸತ್ಯ ತುಂಬಿದ ಹಾಗೆ ಕಾಣಿಸುತ್ತಿತ್ತು. ಜಾರಸ್ತ್ರೀ–ಬ್ಯಾಬಿಲೋನು ದೇವಜನರ ರಕ್ತವನ್ನು ಯೇಸುವಿಗೋಸ್ಕರ ಸಾಕ್ಷಿಕೊಟ್ಟು ಹತ್ತರಾದವರ ರಕ್ತವನ್ನೂ ಕುಡಿದು ಮತ್ತಳಾಗಿರುವಂತೆ ಪ್ರಕ 17:16 ವರ್ಣಿಸುತ್ತದೆ. ಮಧ್ಯಕಾಲದ ಭ್ರಷ್ಟ ಕ್ರೈಸ್ತತ್ವವು ಪೋಪನಿಂದ ನಡೆಸಲ್ಪಟ್ಟು ಸುವಾರ್ತೆಗೆ ನಂಬಿಗಸ್ತರಾಗಿ ಉಳಿದ ಲಕ್ಷ ಲಕ್ಷ ಜನರನ್ನು ಹತ್ಯೆ ಮಾಡಿತು. ಈ ರಕ್ತಾಪರಾಧವು ಅಂತ್ಯಕಾಲದ ಬ್ಯಾಬಿಲೋನಿಗೆ ಸಂಬಂಧಿಸಿದೆ.

**ಬ್ಯಾಬಿಲೋನು ಜಾರಸ್ತ್ರೀಯ ವಿವರಣೆಯು ಥುವತೈರಸಭೆಯ ಯಜಬೇಲಳ ಪ್ರತಿರೂಪದಂತೆ ಬಿಂಬಿಸಲ್ಪಟ್ಟಿದೆ (ಪ್ರಕ 2:20–23ನ್ನು ನೋಡಿರಿ). ಈ ಈರ್ವ ಸ್ತ್ರೀಯರಲ್ಲಿರುವ ಸಮಾನತೆಗಳು ಅಂತ್ಯಕಾಲದ ಬ್ಯಾಬಿಲೋನಿನ ಸ್ವಭಾವವನ್ನು ಮಂಡಿಸುತ್ತವೆ (ಸಾದರಪಡಿಸುತ್ತವೆ) ಹೇಗೆ?**

**ಮಂಗಳವಾರ** **ಮಾರ್ಚ್ 19**

## ರಕ್ತವರ್ಣದ ಮೃಗದ ಗುರುತು

ಪ್ರಕಟನೆ 17:3 ರಕ್ತವರ್ಣದ ಮೃಗವನ್ನು ವರ್ಣಿಸುತ್ತದೆ. ಇದು ಪ್ರಕ 13ನೇ ಅಧ್ಯಾಯದ ಸಮುದ್ರದ ಮೃಗವನ್ನು ಹೋಲುತ್ತದೆ. ಈ ಮೃಗವು ದೇವಜನರ ಮೇಲೆ ಯುದ್ಧ ಮಾಡಿ ಅವರನ್ನು ಜಯಿಸುತ್ತದೆ (ಪ್ರಕ 13:5–7). ಇದು

ಹಿಂದೆ ಕ್ರಿ.ಶ. 538 ರಿಂದ ಕ್ರಿಶ 1798 ರವರೆಗೆ 1260 ವರ್ಷಗಳ ಅವಧಿಯಲ್ಲಿ ಸ್ತ್ರೀಯ ಮೇಲೆ ನಡೆದ ಹಿಂಸೆಯು ಆಕೆಯು ಅರಣ್ಯಕ್ಕೆ ಓಡಿಹೋಗುವಂತೆ ಮಾಡಿತು. ಸರ್ವಸಮಾನತೆಯ ವಾದವನ್ನು ಮಾನ್ಯ ಮಾಡುವ ಯುಗದಲ್ಲಿ (ಕಾಲದಲ್ಲಿ) ವಾಸಿಸುತ್ತಿದ್ದಾಗ್ಯೂ ಹಿಂದೆ ಘಟಿಸಿದ ಭಯಂಕರ ಹಿಂಸೆಯನ್ನು ಪ್ರೊಟೆಸ್ಟಂಟರು ಮತ್ತೆ ನೆನಪಿಗೆ ತರುತ್ತಾರೆ. ಹಿಂದೆ ಸಂಭವಿಸಿದ ಹಿಂಸೆಗಿಂತ ಮತ್ತೆ ಅಂತ್ಯಕಾಲದಲ್ಲಿ ನಡೆಯುವ ಹಿಂಸೆಯು ಇನ್ನೂ ಘೋರವಾಗಿರುತ್ತದೆ ಎಂಬುದಾಗಿ ಪ್ರವಾದನೆ ಹೇಳುತ್ತದೆ.

**ಪ್ರಕಟನೆ 17:8ನ್ನು ಓದಿರಿ. ಇದರಲ್ಲಿರುವ ಪದಗಳನ್ನು ಪ್ರಕ 13:8 ರೊಂದಿಗೆ ಹೋಲಿಸಿ ನೋಡಿರಿ. ಪ್ರಕ 13:3 ಮೃಗದ ಅಸ್ತಿತ್ವದ ಮೂರು ಹಂತಗಳನ್ನು ಅದರ ಚಟುವಟಿಕೆಗಳನ್ನೂ ಹೇಗೆ ಸ್ಪಷ್ಟಪಡಿಸುತ್ತದೆ?**

ರಕ್ತವರ್ಣದ ಮೃಗವು ಹಿಂದೆ ಇತ್ತು ಈವಾಗ ಅದು ಇಲ್ಲ ಇದು ಅದೋಲಕದಿಂದ ಏರಿಬಂದು ನಾಶಕ್ಕೆ ಹೋಗುವುದು. ಈ ಮೂರು ಪದಗಳ ನುಡಿಯು ಮೊದಲಿಗೆ ಇದು ದೈವಿಕ ಹೆಸರು ಯಾಹ್‌ವೇಹ್ (Yahweh) ಎಂಬುದರ ನಕಲಾಗಿಗೆ (ಪ್ರಕ 1:4 ಮತ್ತೂ ಪ್ರಕ 4:8ನ್ನು ನೋಡಿರಿ). ಇದು ಸಹಾ ಮೃಗವು ಹಾದುಹೋಗುವ ಮೂರು ಹಂತಗಳನ್ನು ಸೂಚಿಸುತ್ತದೆ.

**1ನೇ ಹಂತ :** ಮೃಗವು ಇತ್ತು ಎಂದರೆ ಇದು ಹಿಂದೆ ಅಸ್ತಿತ್ವದಲ್ಲಿತ್ತು. ಇದರ ಹಿಂದಿನ ಚಟುವಟಿಕೆಗಳು 42 ತಿಂಗಳುಗಳು ನಡೆಯುತ್ತದೆ ಅಂದರೆ 1260 ದಿನಗಳಿಗೆ (ವರ್ಷಗಳು) ಸಮವಾಗಿರುತ್ತದೆ (ಪ್ರಕ 13:5 ಮತ್ತು 9ನೇ ಪಾಠದ ಭಾನುವಾರ ಭಾಗ).

**2ನೇ ಹಂತ :** ಈವಾಗ ಇಲ್ಲ ಅಂದರೆ ಅದಕ್ಕೆ ಮರಣಂಕು ಗಾಯವಾಯ್ತು (ಪ್ರಕ 13:3) ಮೃಗವು ಅಸ್ತಿತ್ವದಲ್ಲಲ್ಲದ ಹಂತಕ್ಕೆ ಹೋಗುತ್ತದೆ. ಕನಿಷ್ಟ ಹಿಂಸೆ ಕೊಡದ ಪರಿಸ್ಥಿತಿಗೆ ಕ್ರಿಶ 1798 ರಲ್ಲಿ ಹೋಗುತ್ತದೆ. ಇದು ಇದ್ದಾಗ್ಯೂ ಲೋಕದ ದೃಶ್ಯದಿಂದ ಕಾಣದಾಗಿ ಹೋಗಿತ್ತು.

**3ನೇ ಹಂತ :** ಕೊನೆಯಲ್ಲಿ ಮರಣಕರವಾದ ಗಾಯವು ವಾಸಿಯಾಗುತ್ತದೆ. ಮೃಗವು ಪೂರ್ಣವಾಗಿ ಸೈತಾನನ ರೌದ್ರದಿಂದ ಕೂಡಿ ಪುನಶ್ಚೇತನಗೊಳ್ಳುತ್ತದೆ.

ಪ್ರಕಟನೆ 17 ಪ್ರಕ 13:1–8ರ ಮೃಗವನ್ನು ವಿವರಿಸುತ್ತದೆ. ಅದರ ಮರಣಕರ ಗಾಯವು ವಾಸಿಯಾದ ಮೃಗವನ್ನು ವಿವರಿಸುತ್ತದೆ. ಅದರ ಮರಣಕರವಾದ ಗಾಯವು ವಾಸಿಯಾದ ಮೃಗವನ್ನು ವಿವರಿಸುತ್ತದೆ. ಪುನಶ್ಚೇತಗೊಂಡ ಈ ಮೃಗದ ಮೇಲೆ ಬ್ಯಾಬಿಲೋನಿನ ಜಾರಸ್ತ್ರೀ ಕುಳಿತುಕೊಳ್ಳುತ್ತಾಳೆ, ಮತ್ತೆ ಮಧ್ಯಯುಗದಲ್ಲಿ ಇದ್ದ ಹಾಗೆಯೇ ಧಾರ್ಮಿಕ ಮತ್ತು ರಾಜಕೀಯ ಐಕ್ಯತೆ ಅಲ್ಪಾಯುಸ್ಸುಳ್ಳದ್ದಾಗಿರುತ್ತದೆ : ಆದರೆ ಮತ್ತೆ ಹಿಂಸೆಯು ಆರಂಭವಾಗುತ್ತದೆ.

**"ವಿರೋಧತೆಯು ಏಳಲಿ, ಧರ್ಮಾಂದತೆ ಹಾಗು ಅಸಹನೆ ಮತ್ತೆ ಓಲಾಡಲಿ, ಹಿಂಸೆಯ ಕಿಡಿಯು ಹೊತ್ತಿಕೊಳ್ಳಲಿ ಅರ್ಧ ಮನಸ್ಸಿನವರು ಕಪಟಿಗಳು ಅದರಿ ಅಲ್ಲಾಡಿ ತಮ್ಮ ನಂಬಿಕೆಯನ್ನು ಬಿಡಲಿ. ಆದರೆ ನಿಜ ಕ್ರೈಸ್ತನಾದರೋ ಬಂಡೆಯಂತೆ ದೃಢವಾಗಿ ನಿಲ್ಲುತ್ತಾನೆ. ಯಶಸ್ಸಿನ ದಿನಗಳಲ್ಲಿದ್ದುದಕ್ಕಿಂತ ಅವನ ನಂಬಿಕೆಯು ಬಲವಾಗಿರುತ್ತದೆ, ಮತ್ತು ನಿರೀಕ್ಷೆಯು ಪ್ರಕಾಶವುಳ್ಳದ್ದಾಗಿರುತ್ತದೆ.**

ಎಲೆನ್ ಜಿ ವೈಟ್‌ರವರ ಮಹಾಹೋರಾಟ ಪುಟ 602. ಅಂತಿಮ ಘಟನೆಗಳು ನಡೆಯುವ ಮೊದಲು ನಮ್ಮ ಕ್ರೈಸ್ತಾನುಭವವು ಹೇಗಿರಬೇಕು ಎನ್ನುವ ವಿಷಯದಲ್ಲಿ ಯಾವ ಎಚ್ಚರಿಕೆಯನ್ನು ತೆಗೆದುಕೊಳ್ಳುತ್ತೇವೆ?

**ಬುಧವಾರ** **ಮಾರ್ಚ್ 20**

## ಮೃಗದ ಏಳು ತಲೆಗಳು

**ಪ್ರಕ 17:9–11ನ್ನು ಪ್ರಕ 13:18ರ ಜೊತೆಯಾಗಿ ಓದಿರಿ. ಏಳು ತಲೆಗಳನ್ನು ಅರ್ಥ ಮಾಡಿಕೊಳ್ಳಲು ಬುದ್ಧಿಯುಳ್ಳ ಮನಸ್ಸು ಅಗತ್ಯವಾಗಿರುತ್ತದೆ. ಇಲ್ಲಿ ಯಾವ ತೆರನಾದ ಬುದ್ಧಿಯನ್ನು ನೋಡುತ್ತೇವೆ? ಈ ದೈವದತ್ತ ಬುದ್ಧಿಯಿಂದ ಒಬ್ಬನು ಏನನ್ನು ಪಡೆದುಕೊಳ್ಳಬಹುದು? (ಯಾಕೋಬ 1:5).**

ಏಳು ತಲೆಗಳನ್ನು ಏಳು ಬೆಟ್ಟಗಳೆಂದು ದೂತನು ವಿವರಿಸುತ್ತಾನೆ. ಕೆಲವು ಅನುವಾದಕರು ಈ ಬೆಟ್ಟಗಳು ಏಳು ಬೆಟ್ಟಗಳ ಮೇಲಿರುವ ರೋಮ್ ನಗರವನ್ನು ಸೂಚಿಸುತ್ತದೆ ಎಂದು ಹೇಳುತ್ತಾರೆ. ಈ ಕಾರಣದಿಂದ ಗ್ರೀಕ್ ಪದವಾದ 'ಒರೋಯ್– Oroi' (ಪರ್ವತಗಳು) ಬೆಟ್ಟಗಳೆಂದು ಅನುವಾದಕರು

ಅನುವಾದಿಸಿದ್ದಾರೆ. ಇಲ್ಲಿ ಬಿಟ್ಟು ಏಳು ರಾಜರುಗಳೂ ಸಹಾ ಇದ್ದಾರೆ. ಇವರೂ ಕೂಡ ಏಳು ಬೆಟ್ಟಗಳನ್ನು ಸೂಚಿಸುತ್ತಾರೆ ಮತ್ತು ಈ ಬೆಟ್ಟಗಳು ಒಂದರ ಮತ್ತೊಂದು ಬರುತ್ತದೆ. ಎಲ್ಲವೂ ಒಂದೇ ಸಲ ಬರುವುದಿಲ್ಲ.

ಈ ಪ್ರಕಟನೆಗಳು ವೈಯಕ್ತಿಕವಾಗಿ ರಾಜರುಗಳನ್ನು ಸೂಚಿಸುವುದಿಲ್ಲ. ಯಾಕೆಂದರೆ ಪ್ರಕಟನೆಯು ವೈಯಕ್ತಿಕವಾಗಿವಾದುದನ್ನು ಸೂಚಿಸುವುದಿಲ್ಲ. ಆದರೆ ಒಂದು ವ್ಯವಸ್ಥೆಯನ್ನು ಸೂಚಿಸುತ್ತದೆ. ಸತ್ಯವೇದದಲ್ಲಿ ಬೆಟ್ಟಗಳು ಲೋಕಶಕ್ತಿಯನ್ನು ಅಥವಾ ಸಾಮ್ರಾಜ್ಯವನ್ನು ಸಂಕೇತಿಸುತ್ತವೆ (ಯೆರೆ 51:25, ಯೆಹೆ 35:2,3) ಸತ್ಯವೇದದ ಪ್ರವಾದನೆಗಳಲ್ಲಿ ರಾಜರುಗಳು ರಾಜ್ಯವನ್ನು ಪ್ರತಿನಿಧಿಸುತ್ತಾರೆ. (ದಾನಿ 2:37–39, ದಾನಿ 7:17ನ್ನು ನೋಡಿರಿ) ಹಾಗಾಗಿ ಏಳು ಬೆಟ್ಟಗಳು ಕ್ರಮಾನುಗತವಾಗಿ ಏಳು ದೊಡ್ಡ ರಾಜರುಗಳನ್ನು ಸಂಕೇತಿಸುತ್ತವೆ. ಏಳು ಬೆಟ್ಟಗಳು ಚರಿತ್ರೆಯಾದ್ಯಂತ ಲೋಕದ ಮೇಲೆ ತಮ್ಮ ಪ್ರಾಬಲ್ಯವನ್ನು ಮೆರೆದ ಏಳು ದೊಡ್ಡ ರಾಜ್ಯಗಳನ್ನು ಪ್ರತಿನಿಧಿಸುತ್ತವೆ. ಇವುಗಳ ಮೂಲಕವೇ ಸೈತಾನನು ದೇವರನ್ನು ವಿರೋಧಿಸುತ್ತಾನೆ. ಆತನ ಜನರನ್ನು ತೊಂದರೆಪಡಿಸುತ್ತಾನೆ.

ಯೋಹಾನನ ಕಾಲದ ದೃಷ್ಟಿಯಿಂದ ನೋಡಿದರೆ ಈ ರಾಜರುಗಳಲ್ಲಿ ಐವರು ಬಿದ್ದುಹೋದರು, ಈವಾಗ ಒಂದು ಇದೆ ಇನ್ನೊಂದು ಇನ್ನೂ ಬಂದಿಲ್ಲ. ಇತರೆ ವ್ಯಾಖ್ಯಾನುಕಾರರು ಇದನ್ನು ಭಿನ್ನವಾಗಿ ಅರ್ಥೈಸುತ್ತಾರೆ. ಕೆಲವರು ಐದು ರಾಜ್ಯಗಳು ಹಳೆ ಒಡಂಬಡಿಕೆ ಕಾಲದವು ದೇವಜನರಿಗೆ ಕೇಡು ಮಾಡಿದುವುಗಳು. ಅವು ಐಗುಪ್ತ, ಅಶ್ಶೂರ್ಯ, ಬಾಬಿಲೋನ್, ಮೇದ್ಯಪರ್ಶಿಯ ಮತ್ತು ಗ್ರೀಸ್ ಎಂದು ಹೇಳುತ್ತಾರೆ. "ಈವಾಗ ಇದೆ" ಎಂದು ಯೋಹಾನನು ಅವನ ಕಾಲದಲ್ಲಿದ್ದ ರೋಮ್ ರಾಜ್ಯವನ್ನು ಕುರಿತು ಹೇಳುತ್ತಾನೆ. ಇನ್ನೂ ಬಂದಿಲ್ಲದ ಏಳನೇ ರಾಜ್ಯವು ಪ್ರಕ 13ರ ಸಮುದ್ರದ ಮೃಗವು ಸಂಕೇತಿಸುವ ಪೋಪತ್ವ, ಇದು ದೇವ ಜನರ ಮೇಲೆ ದಬ್ಬಾಳಿಕೆ ನಡೆಸಿ ಕೇಡು ಬಗೆಯುತ್ತದೆ. ಇದು ಯೋಹಾನನ ಕಾಲದ ನಂತರ ಅನ್ಯಧಾರ್ಮಿಕ ರೋಮು (Pagan rome) ಅವನತಿ ಹೊಂದಿದ ಮೇಲೆ ಬಂದ ರಾಜ್ಯ. ಚರಿತ್ರೆಯು ಈ ಪ್ರವಾದನೆಯ ಸತ್ಯತೆಯನ್ನು ಬಲವಾಗಿ ದೃಢಪಡಿಸಿದೆ. ಈ ಘಟನೆಗಳು ನಡೆಯುವ ಮುಂಚೆಯೇ ಇವುಗಳ ವಿಷಯದಲ್ಲಿ ಶತಶತಮಾನಗಳ ಹಿಂದೆಯೇ ಪ್ರವಾದನೆಯಾಗಿತ್ತು.

ರಕ್ತವರ್ಣದ ಮೃಗವು ಏಳು ಶಕ್ತಿಗಳಲ್ಲಿ ಒಂದು ಶಕ್ತಿಯಾಗಿದೆ. ಯೋಹಾನನು ಮುಂದುವರೆದು ರಕ್ತವರ್ಣದ ಮೃಗವನ್ನು ಲೋಕದ ಎಂಟನೇ ಶಕ್ತಿಯೆಂದು ತಿಳಿಸುತ್ತಾನೆ. ಹಾಗಾದರೆ ಅನುಕ್ರಮವಾಗಿ ಒಂದು ಏಳು ಶಕ್ತಿಗಳಲ್ಲಿ ಎಂಟನೆಯ ಶಕ್ತಿಯಾಗಿ ಯಾವುದು ಹೊರಹೊಮ್ಮಿತು. ಮರಣಕರವಾದ ಗಾಯವನ್ನು ಹೊಂದಿಕೊಂಡ ಮೃಗವೇ ಈ ಎಂಟನೇ ಶಕ್ತಿಯಾಗಿದೆ. ಇದು ಎಂಟನೇ ಶಕ್ತಿಯಾಗಿರುವಾಗ ಈ ರಕ್ತವರ್ಣದ ಮೃಗವು ಕಾಣಿಸಿಕೊಳ್ಳುತ್ತದೆ. ಇದು ಜಾರಸ್ತ್ರೀ ಬಾಬಲೋನಿನ ಉದ್ದೇಶವನ್ನು ಹೊಂದಿ ಮುಂದೆ ಸಾಗುತ್ತದೆ. ನಾವು ಮರಣಕರವಾದ ಗಾಯವು ವಾಸಿಯಾದ ಕಾಲದಲ್ಲಿ ಜೀವಿಸುತ್ತಿದ್ದೇವೆ. ಅಂತ್ಯವಾಗುವ ಮೊದಲು ಮತ್ತು ನಾಶವಾಗುವ ಮೊದಲು ಎಂಟನೇ ಶಕ್ತಿಯ ಕಾಣಿಸಿಕೊಳ್ಳುತ್ತದೆ.

**ಗುರುವಾರ** **ಮಾರ್ಚ್ 21**

## ಬ್ಯಾಬಿಲೋನಿಗೆ ಆಗುವ ನ್ಯಾಯತೀರ್ಪು

ಪ್ರಕ 17:12–15ನ್ನು ಪರ 16:14–16 ರ ಜೊತೆಗೆ ಓದಿರಿ. ಹತ್ತು ರಾಜರುಗಳ ವಿಷಯದಲ್ಲಿ ಈ ಸತ್ಯವೇದ ಪಠ್ಯಗಳಿಂದ ಏನನ್ನು ಕಲಿಯುತ್ತೇವೆ?

ಹತ್ತು ರಾಜರುಗಳನ್ನು ಗುರುತಿಸಿರುವ ವಿಷಯದಲ್ಲಿ ಭಿನ್ನ ಭಿನ್ನವಾದ ವಾಖ್ಯಾನಗಳು ಕೊಡಲ್ಪಟ್ಟಿವೆ, ಆದರೆ ಪ್ರಕಟನೆಯು ಅವರ್‍ಯಾರು ಎಂದು ಹೇಳುವುದಿಲ್ಲ. ಇವುಗಳೆಲ್ಲಾ ಅಂತ್ಯಕಾಲದಲ್ಲಿ ಜಾರಸ್ತ್ರೀಯನ್ನು ಬೆಂಬಲಿಸುವ ಅಲ್ಪಾವಧಿಯ ರಾಜಕೀಯ ಒಕ್ಕೂಟಗಳೆಂದು ಮೇಲಿನ ಪಠ್ಯಗಳಿಂದ ಅರ್ಥ ಮಾಡಿಕೊಳ್ಳಬೇಕು.

ಇಲ್ಲಿ ಕೊಟ್ಟಿರುವ ಸಂಖ್ಯೆಯ ಮೃಗಕ್ಕೆ ನಿಷ್ಠೆ ತೋರಿಸುವ ಲೋಕದ ಶಕ್ತಿಗಳನ್ನು ಸೂಚಿಸುತ್ತದೆ.

ಪ್ರಕಟನೆ 17:13, 14 ಹರ್ಮೆಗದಾನ್ ಯುದ್ಧವನ್ನು ಸಂಕ್ಷಿಪ್ತವಾಗಿ ಮತ್ತೆ ಮತ್ತೆ ಹೇಳುತ್ತದೆ.

ಇದು ಪ್ರಕ 16:12–16 ರಲ್ಲಿ ಪರಿಚಯವಾಗುತ್ತದೆ. ಅದ್ಭುತವನ್ನು ನಡೆಸುವ ದೆವ್ವಗಳ ಶಕ್ತಿಯ ಜೊತೆಗೆ ಘಟಸರ್ಪ, ಸಮುದ್ರ ಮೃಗ ಸುಳ್ಳು ಪ್ರವಾದಿ ಮತ್ತು ವಿಶ್ವವ್ಯಾಪಿ ಪ್ರಭಾವ ಹೊಂದಿರುವ ರಾಜಕೀಯ ಒಕ್ಕೂಟಗಳು ಪ್ರೇರಿತರಾಗಿ ದೇವರ ಕುರಿಮರಿಯ ಮೇಲೆ ಯುದ್ಧ ಮಾಡುತ್ತವೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಹರ್ಮೆಗೆಡಾನ್ ಯುದ್ಧವು ಸೈನ್ಯಗಳ ನಡುವೆ ನಡೆಯುವಂಥದ್ದಲ್ಲ. ಆದರೆ ಎರಡನೇ ಬರೋಣದ ಸಮಯದಲ್ಲಿರುವ ವಿರಸವಾಗಿದೆ (ಘರ್ಷಣೆ) ಈ ಘರ್ಷಣೆಯು ಸೈತಾನವನ್ನು ಆತನ ಒಕ್ಕೂಟವು ಕ್ರಿಸ್ತನ ಮತ್ತು ಆತನ ದೂತಸೈನ್ಯದ ಮೇಲೆ ನಡೆಯುವ ಹೋರಾಟವಾಗಿದೆ.

**ಪ್ರಕಟನೆ 17:16–18ನ್ನು ಓದಿರಿ. ಹತ್ತು ರಾಜರುಗಳು ತಮ್ಮ ಮನಸ್ಸನ್ನು ಬ್ಯಾಬಿಲೋನಿನ ಕಡೆಗೆ ಬದಲಾಯಿಸುತ್ತಾರೆ. ಈ ಬದಲಾವಣೆಯ ಹಿಂದೆ ಏನಿದೆಯೆಂದು ಪ್ರಕ 16:2–12 ರಲ್ಲಿ ಯಾವುದರಿಂದ ತಿಳಿಯುತ್ತದೆ?**

ದ್ವೇಷ ತುಂಬಿದ ಹತ್ತು ಕೊಂಬುಗಳು ಎಂದರೆ ಅಧಿಕಾರಕ್ಕೆ ಬರುವ ವಿಭಾಜಿತ ಯೂರೋಪ್ ರಾಷ್ಟ್ರಗಳು ಇವು ದ್ವೇಷ ತುಂಬಿದವುಗಳಾಗಿ "ಜಾರಸ್ತ್ರೀ ಬ್ಯಾಬಿಲೋನಿಗೆ" (ಅಂತ್ಯಕಾಲದಲ್ಲಿ ತಲೆದೋರುವ ಪೋಪುಗಾರಿಕೆ) ವಿರೋಧವಾಗಿ ತಿರುಗಿ ನಿಲ್ಲುತ್ತವೆ, ಅವಳನ್ನು ಹಾಳುಗೆಡುಹಿ ಬೆತ್ತಲಾಗುವಂತೆ ಮಾಡುತ್ತವೆ. ಇವು ಸಾಂಕೇತಿಕವಾಗಿ ಅವಳ ಮಾಂಸವನ್ನುತ್ ಇಂದು ರಕ್ತವನ್ನು ಕುಡಿದು ಅವಳನ್ನು ಬೆಂಕಿಯಿಂದ ಸುಟ್ಟು ಹಾಕುತ್ತವೆ. ಈ ಜಾರಸ್ತ್ರೀ ಬ್ಯಾಬಿಲೋನಿಗೆ ಏನಾಗುತ್ತದೆ ಎಂದು ಬರೆಯುವಾಗ ಯೋಹಾನನು ದೇವರು ವ್ಯಭಿಚಾರಿ ಯೆರೂಸಲೇಮನ್ನು ಕುರಿತು ಹೇಳಿದಂತಹ ಮಾತುಗಳನ್ನು ಉಪಯೋಗಿಸುತ್ತಾನೆ (ಯೆರೆ 4:30). ಬೆಂಕಿಯಿಂದ ಸುಡುವುದು ಎಂದರೆ ಯಾಜಕನ ಪುತ್ರಿಯು ವೇಶ್ಯೆಯಂತೆ ನಡೆದುಕೊಂಡಾಗ ಅವಳ ಅನೈತಿಕ ಕೃತ್ಯಕ್ಕೆ ಅವಳನ್ನು ಬೆಂಕಿಯಿಂದ ಸುಡುತ್ತಿದ್ದರು (ಯಾ ಕಾಂಡ 21:9). ಬ್ಯಾಬಿಲೋನು ಅವುಗಳನ್ನು ಉಪದ್ರವಗಳಿಂದ ರಕ್ಷಿಸಲು ಅಸಮರ್ಥವಾದುದರಿಂದ ವಂಚನೆಗೊಳಗಾದ ರಾಜಕೀಯ ಶಕ್ತಿಗಳು ಭ್ರಮನಿರಶನಗೊಂಡವು. ತಾವು ವಂಚಿಸಲ್ಪಟ್ಟೆವು ಎಂಬ ಅರಿವಿನಿಂದ ಅವಳ ಮೇಲೆ ದ್ವೇಷದಿಂದ ಆಕ್ರಮಣ ಮಾಡುವುವು.

ಭ್ರಷ್ಟಗೊಂಡ ಈ ಕಡೆಯ ಕಾಲದ ಧಾರ್ಮಿಕ ವ್ಯವಸ್ಥೆಯು ಮತ್ತು ಇದರೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಲು ಆಯ್ಕೆ ಮಾಡಿಕೊಂಡವರು ದೈವೀಕ ತೀರ್ಪನ್ನು ಪೂರ್ಣವಾಗಿ ಅನುಭವಿಸುವವು.

**ಅಂತ್ಯಕಾಲದ ಘಟನೆಗಳ ಬಗ್ಗೆ ಅನೇಕ ಪ್ರಶ್ನೆಗಳಿಗೆ ಇನ್ನೂ ಉತ್ತರವಿಲ್ಲದೆ ಅವುಗಳು ನಮ್ಮನ್ನು ಗೊಂದಲ ಪಡಿಸುವಂತೆ ಕಾಣಿಸುತ್ತವೆ. ಪ್ರಕ 17:14 ರಲ್ಲಿ ಯಾವ ನಿರ್ದಿಷ್ಟ ವಾಗ್ದಾನ ಕೊಡಲ್ಪಟ್ಟಿದೆ? ಮತ್ತು ಈ ವಾಗ್ದಾನದ ಉದ್ದೇಶ ನಮಗೇನಾಗಿರಬೇಕು?**

**ಶುಕ್ರವಾರ** **ಮಾರ್ಚ್ 22**

**ಹೆಚ್ಚಿನ ಚಿಂತನೆ :** ಬ್ಯಾಬಿಲೋನಿನ ಪೂರ್ಣ ನೈತಿಕ ಅಧಃಪತನವಾಗುವ ಮೊದಲು ಪರಲೋಕದಿಂದ ಬಂದ ಸ್ವರವು ಇನ್ನೂ ಬ್ಯಾಬಿಲೋನಿನಲ್ಲಿರುವ ದೇವಜನರಿಗೆ "ನನ್ನ ಜನರೇ ನೀವು "ಅವಳನ್ನು ಬಿಟ್ಟು ಹೊರಬನ್ನಿರಿ" ಎಂದು ಒತ್ತಾಯಪಡಿಸುತ್ತದೆ (ಪ್ರಕ 18:4).

ನಾನಾ ಕಾರಣಗಳಿಂದ ಅನೇಕ ದೈವರಾಧಕರು ಇನ್ನೂ ಬ್ಯಾಬಿಲೋನಿನಲ್ಲಿಯೇ ಇದ್ದಾರೆ. ದೇವಜನರಿಗೆ "ನನ್ನ ಜನರೇ ನೀವು ಅವಳನ್ನು ಬಿಟ್ಟು ಹೊರಬನ್ನಿರಿ" ಎಂದು ಒತ್ತಾಯಪಡಿಸುತ್ತದೆ (ಪ್ರಕ 18:4). ನಾನಾ ಕಾರಣಗಳಿಂದ ಅನೇಕ ದೈವರಾಧಕರು ಇನ್ನೂ ಬ್ಯಾಬಿಲೋನಿನಲ್ಲಿಯೇ ಇದ್ದಾರೆ. ದೇವರು ತನ್ನ ಜನರನ್ನು ಭ್ರಷ್ಟ ಧಾರ್ಮಿಕ ವ್ಯವಸ್ಥೆಯಿಂದ ಅದರ ಪಾಪಗಳಲ್ಲಿ ಪಾಲು ಹೊಂದದಂತೆ ಹೊರಕ್ಕೆ ಕರೆಯಲು ತನ್ನ ಕಡೇ ಕಾಲದ ಸಭೆಯನ್ನು ಉಪಯೋಗಿಸುತ್ತಾನೆ. ತಮ್ಮ ದುರ್ಗತಿಯಿಂದ ಪಾರಾಗಬೇಕಾದರೆ ಅವರು ಅದನ್ನು ಬಿಟ್ಟು ಹೊರಕ್ಕೆ ಬರಬೇಕು. ದೇವರಿಗೆ ಯಾರೂ ನಾಶವಾಗುವುದು ಇಷ್ಟವಿಲ್ಲ (2 ಪೇತ್ರ 3:9). ಪ್ರಕಟನೆ 19:1–10 ರಲ್ಲಿ ದೇವರಿಗೆ ಭಯಪಡುವ ಅನೇಕ ಜನರು ಈ ಕರೆಗೆ ಓಗೂಡುವುದನ್ನು ದೊಡ್ಡ ಜವಾಬ್ದಾರಿ ಎನ್ನುವುದನ್ನು ಆಲೋಚಿಸಿರಿ.

ನಮ್ಮ ಹೃದಯಗಳಲ್ಲಿ ದೇವರ ಸತ್ಯದ ಅಗತ್ಯತೆ ಮತ್ತು ನಮ್ಮ ಜೀವಿತಗಳಲ್ಲಿ ಪವಿರಾತ್ಮನ ಅಭಿಷೇಕದ ಬಗ್ಗೆ ಈ ಜವಾಬ್ದಾರಿಯು ಏನನ್ನು ಹೇಳುತ್ತದೆ?

## ಚರ್ಚಿಸಬೇಕಾದ ಪ್ರಶ್ನೆಗಳು

1. ಪ್ರಕ 18:14 ತೋರಿಸುವಂತೆ ಬ್ಯಾಬಿಲೋನಿನಲ್ಲಿ ದೇವರಿಗೆ ಭಯಪಡುವ ಜನರು ಅನೇಕರಿದ್ದು ಅವರನ್ನು ದೇವರು 'ನನ್ನ ಜನರು' ಎಂದು ಕರೆಯುತ್ತಾನೆ. ಆತನ ಜನರಾದ ನಾವು ಈ ಸಂದೇಶವನ್ನು ಇತರ ಕ್ರೈಸ್ತರಿಗೆ ಕೊಡಲೇಬೇಕು. ಕೊಡಲೇಬೇಕಾಗಿರುವಾಗ ಸತ್ಯವನ್ನು ತಿಳಿದ ನಾವು ಅದನ್ನು ತಿಳಿಯದವರಿಗೆ ಬಲಾತ್ಕಾರದಿಂದ ತುರುಕದಂತೆ ಎಚ್ಚರ ವಹಿಸಬೇಕು. ಕಥೋಲಿಕರಿಗೆ ಸತ್ಯದ ಬೆಳಕನ್ನು ಕೊಡುವಾಗ ಅವರೊಂದಿಗೆ ಕಠಿಣವಾಗಿ ವರ್ತಿಸಬಾರದು. ಆದರೂ ನಮ್ಮ ದಾರಿಯನ್ನು ಬಿಡಬಾರದು. ಕಥೋಲಿಕರಲ್ಲಿ ಅನೇಕರು, ಹೆಚ್ಚು ಪ್ರಜ್ಞಾವಂತ ಕ್ರೈಸ್ತರಾಗಿರುತ್ತಾರೆ. ತಮಗೆ ಸಿಕ್ಕಿರುವ ಬೆಳಕಿನಲ್ಲಿ ಪೂರ್ಣವಾಗಿ ನಡೆಯುವವರಾಗಿರುತ್ತಾರೆ. ಆದುದರಿಂದ ದೇವರು ಅವರ ಪರವಾಗಿ ಕೆಲಸ ಮಾಡುತ್ತಾನೆ (ಕಾರ್ಯ ಮಾಡುತ್ತಾನೆ).

   "ದೊಡ್ಡ ಸವಲತ್ತುಗಳು ಮತ್ತು ಅವಕಾಶಗಳು ಕೊಡಲ್ಪಟ್ಟಿದ್ದರೂ ತಮ್ಮ ದೈಹಿಕ, ಮಾನಸಿಕ ಮತ್ತು ನೈತಿಕ ಬಲಗಳನ್ನು ಸುಧಾರಿಸಿಕೊಳ್ಳಲು ವಿಫಲರಾಗುವ ಜನರು ತಪ್ಪು ಉಪದೇಶಗಳನ್ನು ಹಿಡಿದುಕೊಂಡಿದ್ದರೂ ಇತರರಿಗೆ ಒಳ್ಳೆಯದನ್ನು ಮಾಡಲು ಹಂಬಲಿಸುವ ಜನರಿಗಿಂತ ಹೆಚ್ಚು ಅಪಾಯದಲ್ಲಿರುತ್ತಾರೆ ಮತ್ತು ಅವರಿಗೆ ದೊಡ್ಡ ದಂಡನೆಯಾಗುತ್ತದೆ. ಎಲೆನ್ ಜಿ ವೈಟಮ್ಮನವರ "ಎವಾಂಗಲಿಸಮ್, ಪುಟ 575 ಓದಿರಿ. ಇತರರನ್ನು ನಾವು ಹೇಗೆ ಸತ್ಕರಿಸಬೇಕು ಎಂಬುದರ ಬಗ್ಗೆ ಈ ಆಲೋಚನೆ ನಮಗೆ ಏನನ್ನು ಹೇಳುತ್ತದೆ?

2. ಪ್ರಕಟನೇ ಅಧ್ಯಾಯ ಜಾರಸ್ತ್ರೀಯೊಬ್ಬಳು ಮೃಗದ ಮೇಲೆ ಕುಳಿತಿರುವುದನ್ನು ವಿವರಿಸುತ್ತದೆ. ಆದರೆ ಪ್ರಕ 12ನೇ ಅಧ್ಯಾಯದಲ್ಲಿರುವ ಸ್ತ್ರೀಯು ದೇವರಿಗೆ ನಂಬಿಗಸ್ತವಾದ ಸಭೆಯುನ್ನು ಸಂಕೇತಿಸುವಂತೆ ಪ್ರಕ 17ನೇ ಅಧ್ಯಾಯದಲ್ಲಿರುವ ಸ್ತ್ರೀಯು ಲೋಕವನ್ನು ಮರುಳು ಮಾಡಿ ದೇವರಿಂದ ದೂರ ಮಾಡುವ ಭ್ರಷ್ಟ ಸಭೆಗೆ ಸೂಚಿತವಾಗಿದ್ದಾಳೆ. ನಿಮ್ಮ ದೃಷ್ಟಿಯಲ್ಲಿ

ಈ ಸ್ತ್ರೀಯರ ಮಧ್ಯೆಯಿರುವ ಸಮಸ್ಯೆಗಳೇನು? ಮುಖ್ಯವಾಗಿ ಈ ಹೋಲಿಕೆಯಿಂದ ನಾವು ಏನನ್ನು ಕಲಿಯಬಹುದು?

3. ಈ ವಾರದ ಪಾಠ ಪಠ್ಯಗಳು ಕ್ರಿಸ್ತನು ಜಯಶಾಲಿಯಾಗಿ ಹಿಂದಿರುವ ಮುಂಚೆಯಿರುವ ಧಾರ್ಮಿಕ ಮತ್ತು ರಾಜಕೀಯ ಶೋಚನೀಯ ಸ್ಥಿತಿಯನ್ನು ವರ್ಣಿಸುತ್ತವೆ. ದೇವರು ನಮಗೆ ಕೊಟ್ಟಿರುವ ಸಂದೇಶಕ್ಕೆ ಈವಾಗ ನಂಬಿಗಸ್ತರಾಗಿ, ನಿಜವಂತರಾಗಿ, ಪರಿಶುದ್ಧರಾಗಿ ಉಳಿಯುವುದು ಯಾಕೆ ಮುಖ್ಯವಾದದ್ದು ಎಂಬುದರ ಬಗ್ಗೆ ಇದು ಏನನ್ನು ಹೇಳುತ್ತದೆ? ಪ್ರಕ 15:16ನ್ನು ಓಡಿರಿ. ಇದು ಲೋಕವ್ಯಾಪ್ತಿ ಭ್ರಷ್ಟತೆಯು ನಡುವೆ ಪ್ರಾಮಾಣಿಕತೆಗೋಸ್ಕರ ಮಾಡುವ ಮನವಿಯಾಗಿದೆ. ಈವಾಗ ಈ ಎಚ್ಚರಿಕೆಯನ್ನು ನಮಗೆ ಹೇಗೆ ಅನ್ವಯಿಸಿಕೊಳ್ಳಬಹುದು?